ಓ ಎಸ್ ನಂ. 25/2017

ಪಿ ಡಬ್ಲ್ಯು 1

ದಿನಾಂಕ 28-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಎನ್ ಎಸ್ ವಕೀಲರಿಂದಃ

ಸಾಮಾನ್ಯವಾಗಿ ನಾನು ಜಮೀನನ್ನು ಮಾರಾಟ ಮಾಡುವಾಗ ಆಗಲಿ ಅಥವಾ ಕೊಂಡುಕೊಳ್ಳುವಾಗ ಆಗಲಿ ಸದರಿ ಜಮೀನಿಗೆ ಸಂಬಂದಪಟ್ಟಂತೆ ಕ್ರಯಪತ್ರದ ಆಧಾರದಲ್ಲಿ ಕೊಂಡುಕೊಳ್ಳುತ್ತೇನೋ ಅಥವಾ ಕರಾರು ಪತ್ರ ಅಥವಾ ಕಬುಲಿ ಪತ್ರದ ಆಧಾರದ ಮೇಲೆ ಕೊಂಡುಕೊಳ್ಳುತ್ತೇನೋ ಎಂದರೆ ಸಾಕ್ಷಿ ನೊಂದಣಿ ಪತ್ರವಾಗಬೇಕು ಎಂದು ನುಡಿಯುತ್ತಾರೆ. ವಾದಿಗೆ ಹಿಸ್ಸೆಯನ್ನು ಎಷ್ಟು ಬಾರಿ ನೀಡಿದ್ದೀರಾ ಎಂದರೆ ಸಾಕ್ಷಿ ಮೊದಲು ನಾಲ್ಕುವರೆ ಎಕರೆ ಜಮೀನನ್ನು ನನ್ನ ತಂದೆ ಬದುಕಿದ್ದಾಗ ಕೊಟ್ಟಿದ್ದರು, ನನ್ನ ತಂದೆ ಮರಣದ ಹೊಂದಿದ ನಂತರ ವಾದಿ ದಾವೆ ಹೂಡಿದ್ದರಿಂದ ನಮ್ಮ ಜಮಾಯತ್ತಿನಲ್ಲಿ ತೀರ್ಮಾನ ಮಾಡಿ ಅದರಂತೆ 10 ಸಾವಿರ ಹಣ ಮತ್ತು 20 ಗುಂಟೆ ತೋಟವನ್ನು ಬಿಟ್ಟುಕೊಡುವಂತೆ ತೀರ್ಮಾನವಾಯಿತು ಎಂದು ನುಡಿಯುತ್ತಾರೆ. ಸದರಿ ಜಮಾಯತ್ತಿನಲ್ಲಿ ಆದ ತೀರ್ಮಾನ ಬರವಣಿಗೆಯಾಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಬರವಣಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಡಿ-3

ಮತ್ತು 4 ರ ದಾಖಲೆಗಳಲ್ಲಿ 10 ಸಾವಿರ ರೂ ಹಣ ಮತ್ತು 20 ಗುಂಟೆ ಜಮೀನನ್ನು ವಾದಿಗೆ ಬಿಟ್ಟು ಕೊಟ್ಟಿರುವ ಬಗ್ಗೆ ಎಲ್ಲಿಯೂ ನಮೂದು ಇಲ್ಲ ಎಂದರೆ ಸಾಕ್ಷಿ ಆ ದಾಖಲೆಗಳಲ್ಲಿ ಆ ಬಗ್ಗೆ ನಮೂದು ಇದೆ ಎಂದು ನುಡಿಯುತ್ತಾರೆ. ನಿಡಿ-3 ಮತ್ತು 4 ರ ಪತ್ರಗಳಲ್ಲಿ ವಾದಿ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-3 ರ ದಾಖಲೆಯನ್ನು ತೋರಿಸಿ ಅದರಲ್ಲಿ ವಾದಿಯ ಸಹಿ ಎಲ್ಲಿದೆ ಎಂದು ಕೇಳಲಾಗಿ ಸಾಕ್ಷಿ ಸದರಿ ದಾಖಲೆ ಪರಿಶೀಲಿಸಿ ವಾದಿ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ವಾದಿ ಈಗಾಗಲೇ ಒಂದು ಪತ್ರಕ್ಕೆ ಸಹಿ ಮಡಿರುವುದರಿಂದ ನಿಡಿ-3 ರ ಪತ್ರಕ್ಕೆ ಸಹಿ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳಿದರು ಎಂದು ನುಡಿಯುತ್ತಾರೆ. ಮತ್ತೊಂದು ಪತ್ರಕ್ಕೆ ವಾದಿ ಸಹಿ ಮಾಡಿರುತ್ತಾರೆ ಎಂದು ಹೇಳಿದ್ದು, ಆ ಪತ್ರ ಮತ್ತು ನಿಡಿ-3 ರ ಪತ್ರಗಳು ಯಾವಾಗ ಆಗಿದ್ದು ಎಂದರೆ ಸಾಕ್ಷಿ ಎರಡೂ ಪತ್ರಗಳು ಒಂದೇ ದಿನ ಆಗಿದ್ದು ಎಂದು ನುಡಿಯುತ್ತಾರೆ. ನಿಡಿ-3 ರ ಹಿಸ್ಸಾ ಕರಾರು ಪತ್ರ ಸಾಬ್ ಜೀ ಸಾಬ್ ಬಿನ್ ಖಾಸಿಂಸಾಬ್ ಎಂಬುವವರಿಗೆ ನಾನು ಬರೆದುಕೊಟ್ಟಂತೆ ಇದೆ ಎಂದರೆ ಸಾಕ್ಷಿ ಸದರಿ ಪತ್ರವನ್ನು ಜಮಾಯತ್ತಿನಲ್ಲಿ ವಾದಿಯೇ ಬರೆಸಿರುತ್ತಾರೆ, ನಾನು ಓದಿಲ್ಲ ಎಂದು ನುಡಿಯುತ್ತಾರೆ. ನಿಡಿ-3 ರ ಪತ್ರವನ್ನು ನಾನು ಬರೆದುಕೊಟ್ಟಿದ್ದರೆ ಅದು ವಾದಿಯ ಬಳಿ ಇರಬೇಕಾಗಿತ್ತು, ನನ್ನ ಬಳಿ ಹೇಗೆ ಬಂತು ಎಂದರೆ ಸಾಕ್ಷಿ ಜಮಾಯತ್ತಿನಲ್ಲಿ ತೀರ್ಮಾನವಾಗಿ ನಾವೆಲ್ಲಾ ಒಂದಾದ

ನಂತರದಲ್ಲಿ ಸದರಿ ಪತ್ರವನ್ನು ನನಗೆ ಜಮಾಯತ್ತಿನವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿ ಸರ್ವೆ ನಂ.119/ಪಿರಲ್ಲಿ 19 ತೆಂಗಿನ ಮರ ಎಂದು ಮಾತ್ರ ನಮೂದು ಇದ್ದು, ಎಷ್ಟು ವಿಸ್ತೀರ್ಣ ಮತ್ತು ಮೊತ್ತ ಎಂಬುದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಅದು ವಾದಿಗೆ ಗೊತ್ತು ಎಂದು ನುಡಿಯುತ್ತಾರೆ. ನಿಡಿ-3 ರ ಪತ್ರವನ್ನು ನಾನು ಜಮಾಯತ್ತಿನಲ್ಲಿ ಓದಿಸಿ ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಓದಿಸಿ ತಿಳಿದುಕೊಂಡಾಗ ಸದರಿ ಪತ್ರದಲ್ಲಿ 10 ಸಾವಿರ ಹಣ ಮತ್ತು 20 ಗುಂಟೆ ಜಮೀನಿನ ಬಗ್ಗೆ ನಮೂದು ಇಲ್ಲದೆ ಇರುವುದನ್ನು ತಿಳಿದು ಅದನ್ನು ನಮೂದು ಮಾಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

ವಾದಿ ನನ್ನ ಮತ್ತು ಖಲಂದರ್ ಖಾನ್ ರವರ ವಿರುದ್ಧ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಓ ಎಸ್ ನಂ.510/1994 ರಂತೆ ಕಡೂರಿನ ಮುನಿಷಿಪ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಲ್ಲಿಸಿದಂತೆ ತಕರಾರಿನ ಅಂಶಗಳು ಸರಿ ಇತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನನ್ನ ತಕರಾರಿನಲ್ಲಿ 1979 ರಲ್ಲಿ ನನ್ನ ತಂದೆ ಬದುಕಿದ್ದಾಗ ವಾದಿಗೆ ಕೆಲವೊಂದು ಆಸ್ತಿಗಳಲ್ಲಿ ದಿನಾಂಕ 15/11/1988 ರಂದು ಕರಾರು ಮಾಡಿ ಹಿಸ್ಸೆ ನೀಡಲಾಗಿದೆ ಎಂದು

ತಿಳಿಸಿರುತ್ತೇನೆ ಎಂದರೆ ಸಾಕ್ಷಿ ಆ ರೀತಿ ನಾನು ತಕರಾರಿನಲ್ಲಿ ಹೇಳಿಲ್ಲ ಎಂದು ನುಡಿಯುತ್ತಾರೆ. ಅಲ್ಲದೇ ಅದೇದಿನ ವಾದಿ ನನ್ನಿಂದ 25 ಸಾವಿರ ರೂ ಹಣವನ್ನು ಪಡೆದು ವಾದಿಯ ಹಿಸ್ಸೆಗೆ ಬಂದ ಆಸ್ತಿಯನ್ನು ನನ್ನ ಹೆಸರಿಗೆ ಕರಾರಿನ ಮೂಲಕ ಬಿಟ್ಟು ಕೊಟ್ಟಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ದಿನಾಂಕ 15/11/1988 ರಂದು ಆದ ಕರಾರು ಯಾರ ಬಳಿ ಇದೆ ಎಂದರೆ ಸಾಕ್ಷಿ ನನ್ನ ಬಳಿ ಇದೆ ಎಂದು ನುಡಿಯುತ್ತಾರೆ. ಸದರಿ ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. 1988 ರಲ್ಲಿ ಆದ ಸದರಿ ಕರಾರಿಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ, ವಾದಿಯ ಮಾವ ಬಾಬ್ ಜಾನ್ ಸಾಬ್, ಜಮಾಲ್ ಖಾನ್, ಅಬ್ದುಲ್ ರಶೀದ್ ಸಾಬ್ ರವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೇಲ್ಕಂಡ ಕರಾರು ಪತ್ರದಡಿಯಲ್ಲಿ 25 ಸಾವಿರ ರೂ ಹಣ ಪಡೆದು ವಾದಿ ನನಗೆ ನಾಲ್ಕೂವರೆ ಎಕರೆ ಜಮೀನು ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳಿದ್ದು, ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ಕ್ರಯಪತ್ರ ಮಾಡಿಸಿಕೊಂಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ, ನಾನು ಹಾಜರುಪಡಿಸುತ್ತೇನೆ.

ನಿಡಿ-6 ರ ಓ ಎಸ್ ನಂ.510/1994 ರ ದಾವೆಯ ವಾದಪತ್ರದಲ್ಲಿ ಮಾಡಿರುವಂತಹ ವಾದಿಯ ಸಹಿಗೂ ನಿಡಿ-4 ರ ದಾಖಲೆಯಲ್ಲಿ ಇರುವಂತಹ ವಾದಿಯ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಅದು ವಾದಿಯ ಸಹಿಯೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯ ವಾದ ಪತ್ರದಲ್ಲಿರುವ ವಾದಿಯ ಸಹಿಗೂ ನಿಡಿ-4 ರಲ್ಲಿರುವ ವಾದಿಯ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಎರಡೂ ಸಹಿಗಳನ್ನು ವಾದಿಯೇ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-4 ರ ದಾಖಲೆಯಲ್ಲಿ ಇರುವಂತಹ ಸಹಿ ವಾದಿಯದ್ದಲ್ಲ, ಸದರಿ ದಾಖಲೆ ಮತ್ತು ಸಹಿಯನ್ನು ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಮಾಯತ್ತಿನ ಸಮಕ್ಷಮದಲ್ಲಿ ವಾದಿ ನಿಡಿ-4 ರ ದಾಖಲೆಗೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಓ ಎಸ್ ನಂ.510/1994 ರ ದಾವೆಯನ್ನು ರಾಜಿ ಮಾಡಿ ತೀರ್ಮಾನವಾಯಿತೆ ಅಥವಾ ಯಾವ ರೀತಿ ತೀರ್ಮಾನವಾಯಿತು ಎಂದರೆ ಸಾಕ್ಷಿ ಜಮಾಯತ್ತಿನಲ್ಲಿ ತೀರ್ಮಾನವಾದಂತೆ ವಾದಿ ಸದರಿ ದಾವೆಯನ್ನು ಹಿಂಪಡೆಯುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ವಾದಿ ಸದರಿ ದಾವೆಯನ್ನು ಹಿಂಪಡೆದರೂ ಅಥವಾ ವಜಾವಾಯಿತು ಎಂದು ನನ್ನ ವಕೀಲರ ಮೂಲಕ ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಡಿ-4 ರ ದಾಖಲೆಯಾಗುವ ಕಾಲಕ್ಕೆ ಓ ಎಸ್ ನಂ.510/1994 ರ ದಾವೆ ಚಾಲ್ತಿಯಲ್ಲಿತ್ತು. ಸದರಿ

ದಾಖಲೆಯಾಗುವ ಕಾಲಕ್ಕೆ ವಾದಿಗೆ ನಾನು ಹಣ ಕೊಟಿಟದ್ದೇನಾ ಎಂದರೆ ಸಾಕ್ಷಿ ಹೌದು 10 ಸಾವಿರ ರೂ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. 10 ಸಾವಿರ ರೂ ಕೊಟ್ಟ ಬಗ್ಗೆ ಯಾವ ದಾಖಲೆ ಇದೆ ಎಂದರೆ ಸಾಕ್ಷಿ ಅದರಲ್ಲಿಯೇ ನಮೂದು ಇದೆ ಎಂದು ನುಡಿಯುತ್ತಾರೆ. ಹಣವನ್ನು ಹಿಸ್ಸಾ ರೂಪದಲ್ಲಿ ಕೊಟ್ಟಿದ್ದ ಅಥವಾ ಯಾವುದಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದಾವೆಯನ್ನು ಹಿಂಪಡೆಯಲು ಎಂದು ನುಡಿಯುತ್ತಾರೆ. 10 ಸಾವಿರ ರೂ ಕೊಟ್ಟು ದಾವೆ ಹಿಂಪಡೆಯುವ ಬಗ್ಗೆ ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಡಿ-4 ರ ದಾಖಲೆಯಲ್ಲಿ ಓ ಎಸ್ ನಂ.510/1994 ರ ದಾವೆಯನ್ನು ಹಿಂಪಡೆಯುತ್ತೇನೆ ಎಂದರೆ ಸಾಕ್ಷಿ ವಾದಿಯೇ ಅದೇದಿನ ಹಿಂಪಡೆಯುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದಿನಾಂಕ 10/06/1996 ರಂದು ಓ ಎಸ್ ನಂ.510/1994 ರ ದಾವೆಯನ್ನು ಸಂಬಂದಪಟ್ಟ ಪರಿವ್ಯಾಪ್ತಿ ಇರುವ ನ್ಯಾಯಾಲಯಕ್ಕೆ ಸಲ್ಲಿಸುವಂತೆ ವಾದಪತ್ರವನ್ನು ಹಿಂತಿರುಗಿಸಲು ಮುನ್ಸಿಪ್ ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆಯೇ ಹೊರತು ರಾಜಿ ತೀರ್ಮಾನವಲ್ಲ ಎಂದರೆ ಸರಿಯಲ್ಲ. ನಿಡಿ-4 ರ ದಾಖಲೆಯಲ್ಲಿ ಸರ್ವೆ ನಂ. 119/ಪಿ ರಲ್ಲಿ ಇಬ್ಬರು ತಲಾ 4 ಎಕರೆ 20 ಗುಂಟೆಯಂತೆ ಹಿಸ್ಸೆ ಮಾಡಿಕೊಂಡಿರುವುದು ಎಂಬುದಾಗಿ ನಮೂದು ಇದೆ ಎಂದರೆ ಸರಿ. ಆ ರೀತಿ ಹಿಸ್ಸೆ ಕೊಟ್ಟ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಪಾಲುಪಾರಿಕತ್ತು ಇದೆ ಎಂದು

ನುಡಿಯುತ್ತಾರೆ. ಸದರಿ ಪಾಲುಪಾರಿಕತ್ತು ಯಾರ ಬಳಿ ಇದೆ ಎಂದರೆ ಸಾಕ್ಷಿ ನನ್ನ ಬಳಿ ಮತ್ತು ವಾದಿ ಬಳಿ ಇದೆ ಎಂದು ನುಡಿಯುತ್ತಾರೆ. ಸದರಿ ಪಾಲುಪರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ವಾದಿಯ ಹೆಸರಿಗೆ 4 ಎಕರೆ 20 ಗುಂಟೆ ಜಮೀನನ್ನು ಕೊಟ್ಟ ಬಗ್ಗ ಹೇಳಿದ್ದು ಆ ಬಗ್ಗ ಅವರ ಹೆಸರಿಗೆ ಖಾತೆ ಆಗಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಾದಿ ನನಗೆ 4 ಎಕರೆ 20 ಗುಂಟೆಯನ್ನು ಬಿಟ್ಟುಕೊಟ್ಟ ಬಾಬ್ತು ನಾನು ಅವರಿಗೆ 35 ಸಾವಿರ ರೂ ಹಣ ಕೊಟ್ಟಿರುತ್ತೇನೆ. ಯಾವ ರೀತಿ ಬಿಟ್ಟು ಕೊಟ್ಟಿದ್ದು ಎಂದರೆ ಸಾಕ್ಷಿ ಮಾರಾಟ ಮಾಡಿದ್ದು ಎಂದು ನುಡಿಯುತ್ತಾರೆ. ಸದರಿ ಶುದ್ಧಕ್ರಯಪತ್ರ ಯಾರ ಬಳಿ ಇದೆ ಎಂದರೆ ಸಾಕ್ಷಿ ನನ್ನ ಬಳಿ ಇದೆ ಎಂದು ನುಡಿಯುತ್ತಾರೆ.

ನಿಡಿ-4 ರ ದಾಖಲೆಯಾಗುವ ಪೂರ್ವದಲ್ಲಿ ನಾನು ಖಲಂದರ್ ಖಾನ್ ರವರಿಗೆ 3 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತನ್ನು ನೊಂದಣಿ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತೇನೆ. ವಾದಿ ನನಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳಿದ್ದು, ಆ ಬಗ್ಗ ಶುದ್ಧಕ್ರಯಪತ್ರ ಮಾಡಿಸಿಕೊಳ್ಳಲು ನನಗೆ ತೊಂದರೆ ಇತ್ತ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಕರಾರಿನಂತೆ ನೊಂದಣಿ ಮಾಡಿಕೊಡುವಂತೆ ವಾದಿಯನ್ನು ಕೇಳುವುದಾಗಲಿ ಅಥವಾ ಕಾನೂನಿನ ಕ್ರಮ ಕೈಗೊಂಡಿದ್ದೀರಾ ಎಂದರೆ

ಸಾಕ್ಷಿ ಕೇಳಿರುತ್ತೇವೆ ಏನಕ್ಕೆ ಬೇಕು ಅಣ್ಣತಮ್ಮಂದಿರು ಅಲ್ಲವೇ ಎಂದು ಸುಮ್ಮನಾದೆ ಎಂದು ನುಡಿಯುತ್ತಾರೆ. ಆದ್ದರಿಂದ ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲವೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆ ನಡೆಯುತ್ತಿರುವಾಗಲೇ ದಿನಾಂಕ 22/11/2020 ರಂದು ನಾನು ಮತ್ತು ನನ್ನ ಮಕ್ಕಳು ಸೇರಿ ಒಂದು ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ನೊಂದಣಿ ಮಾಡಿಸಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದ ದೃಡೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು **ನಿಪಿ-9** ಎಂದು ಗುರುತಿಸಲಾಯಿತು. ನಾನು ಮತ್ತು ನನ್ನ ಮಕ್ಕಳ ನಡುವೆ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಂತೆ, ವಾದಿ ಜತೆ ಆದ ವಿಭಾಗವನ್ನು ನೊಂದಣಿ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆಗಿನ ಕಾಲದಲ್ಲಿ ಪತ್ರದ ಮೇಲೆ ಹೋಗುತ್ತಿತ್ತು, ನೊಂದಣಿಯ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಡಿ-3 ಮತ್ತು 4 ರ ಪತ್ರಗಳು ಆಗುವ ಎಷ್ಟು ವರ್ಷಗಳ ಪೂರ್ವದಲ್ಲಿ ಖಲಂದರ್ ಖಾನ್ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ಸುಮಾರು ಹತ್ತಾರು ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನೊಂದಣಿ ಮಾಡಿಸಿರುತ್ತೇನೆ ಅಲ್ಲವೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಓ ಎಸ್ ನಂ.510/1994 ರ ದಾವೆಯ ವಾದಪತ್ರವನ್ನು ನ್ಯಾಯಾಲಯದವರು ಹಿಂತಿರುಗಿಸಿಲು ಆದೇಶ ಮಾಡಿದಾಗ ವಾದಿ ಅನಾರೋಗ್ಯದಿಂದ ಚಿಕ್ಕಮಗಳೂರಿನಲ್ಲಿ ವಾಸ ಇದ್ದರು ಎಂದರೆ ಸರಿ. ಆಗಿನಿಂದ ಈ ದಿನಾಂಕದವರೆಗೂ ವಾದಿ ಚಿಕ್ಕಮಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿ ಊರಿಗೆ ಬಂದು ಹೋಗುತ್ತಾರೆ, ಆದರೆ ಚಿಕ್ಕಮಗಳೂರಿನಲ್ಲಿ ವಾಸ ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ನಮ್ಮ ಊರಿಗೆ ಏಕೆ ಬರುತ್ತಾರೆ ಎಂದರೆ ಸಾಕ್ಷಿ ಹಬ್ಬ, ಇತರೆ ಸಮಾರಂಭಗಳಿಗೆ ನಮ್ಮ ಮನೆಗೆ ಬರುತ್ತಾರೆ, ನಾನು ಮಾತನಾಡದೆ ಇದ್ದರೂ ಸಹ ಅವರು ನಮ್ಮ ಮನೆಗೆ ಬರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಚಿಕ್ಕಮಗಳೂರಿಗೆ ಹೋದಾಗಿನಿಂದಲೂ ಸಹ ಅವರಿಗೆ ಹಿಸ್ಸೆ ಕೊಡುತ್ತೇನೆಂದು ಹೇಳುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನಾನು ಯಾವುದೇ ಹಿಸ್ಸೆ ನೀಡದೆ ಇರುವುದರಿಂದ ವಾದಿ ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ಒಂದುವೇಳೆ ವಾದಿಗೆ ಹಿಸ್ಸೆ ಕೊಟ್ಟಿದ್ದರೆ ನನ್ನ ಬಳಿ ಹಿಸ್ಸಾ ಪತ್ರ ಮತ್ತು ಕ್ರಯಪತ್ರಗಳು ಇರುತ್ತಿದ್ದರು ಎಂದರೆ ಸಾಕ್ಷಿ ಆ ದಾಖಲೆಗಳು ನನ್ನ ಬಳಿ ಇವೆ ಎಂದು ನುಡಿಯುತ್ತಾರೆ. ನಿಡಿ-3 ಮತ್ತು 4 ರ ದಾಖಲೆಗಳನ್ನು ವಾದಿ ಮಾಡಿಕೊಟ್ಟಿಲ್ಲ, ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ಕೊಡಬೇಕೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S. No.25/2017 PW1

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.